**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.**198/2021

**PW.** 2

**CW.** 2

**ಸಾಕ್ಷಿಯ ಹೆಸರು** **–ಮಧು ಎ ಕೆ**

**ತಂದೆಯ ಹೆಸರು** **–ಕುಮಾರ**

**ವಯಸ್ಸು** –24 **ವರ್ಷಗಳು**

ದಿನಾಂಕ 29–01–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ** **–ಚಾಲಕ**

**ವಾಸಸ್ಥಳ** **–ದೇವರಾಜ ಕಾಲೋನಿ, ಹುಣಸೂರು ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1 ನನ್ನ ಅತ್ತೆ ಮಗ. ಚಾಸಾ–3 ನನ್ನ ಚಿಕ್ಕಪ್ಪನ ಮಗ. ಚಾಸಾ–4 ನನ್ನ ಮಾವ. ಆರೋಪಿತರೆಲ್ಲರೂ ಗೊತ್ತು. ಅವರೆಲ್ಲರೂ ಎಮ್ಮಿಗೆ ಕಾಲೋನಿ ವಾಸಿಗಳು. ಈಗ್ಗೆ 5 ವರ್ಷಗಳ ಹಿಂದೆ ಒಂದು ದಿನ ಸಂಜೆ ಸಮಯದಲ್ಲಿ ನನ್ನ ಮತ್ತು ಚಾಸಾ–3 ರವರ ಮನೆಯ ಮುಂದೆ 1, 2 ಮತ್ತು 4 ನೇ ಆರೋಪಿತರು ದ್ವಿಚಕ್ರ ವಾಹನವನ್ನು ಉಪಯೋಗಿಸಿ, ವಿಲಿಂಗ್ ಚಾಲನೆ ಮಾಡುತ್ತಿದ್ದು, ಅದಕ್ಕೆ ನಾನು ಮತ್ತು 3 ರವರು ದನಕರುಗಳು ಇದ್ದಾವೆ, ವಿಲಿಂಗ್ ಮಾಡಬೇಡಿ ಎಂದು ಹೇಳಿದೆವು. ಆದಾದ ಒಂದು ವಾರದ ನಂತರ ಚಾಸಾ–1, ನಾನು ಮತ್ತು ಚಾಸಾ–3 ರವರೊಂದಿಗೆ ದೇವರಾಜ ಕಾಲೋನಿ ಗೇಟ್ ಬಳಿ ನಿಂತಿರುವಾಗ, ಎಲ್ಲ ಆರೋಪಿತರೂ ಆಟೋದಲ್ಲಿ ಅಲ್ಲಿಗೆ ಬಂದು ನನ್ನ ಮತ್ತು ಚಾಸಾ–3 ರವರ ಜೊತೆ ಜಗಳ ಮಾಡಿ, ವಿಲಿಂಗ್ ಮಾಡುವುದನ್ನು ಕೇಳಲು ನೀನ್ಯಾರು ಎಂದು, ಕೈಯಿಂದ ನನಗೆ ಮತ್ತು ಚಾಸಾ–3 ರವರಿಗೆ ಹೊಡೆದರು. ಚಾಸಾ–1 ರವರು ಕೇಳಲು ಹೋದಾಗ, 1 ನೇ ಆರೋಪಿ ಚಾಸಾ–1ರವರನ್ನು ಕೊಲೆ ಮಾಡುವ ಉದ್ದೇಶದಿಂದ ತನ್ನ ಬಳಿ ಇದ್ದ ಗುದ್ದಲಿಯಿಂದ ಚಾಸಾ–1 ರವರ ತಲೆಯ

ಹಿಂಭಾಗದ ಬಲಭಾಗಕ್ಕೆ ಹೊಡೆದು ರಕ್ತಗಾಯ ಮಾಡಿದ. ಚಾಸಾ–1 ರವರ ತಲೆಯಿಂದ ರಕ್ತ ಬಂದ ಕಾರಣ ಆರೋಪಿತರು ಅಲ್ಲಿಂದ ಆಟೋಇದಲ್ಲಿ ಹೊರಟು ಹೋದರು. ಚಾಸಾ–4 ರವರಿಗೆ ಫೋನ್ ಮಾಡಿ ತಿಳಿಸಿದೆವು.

ನಂತರ ಚಾಸಾ–4 ರವರ ಚಾಸಾ–1 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ–1 ರವರು ಮೈಸೂರಿನ ಕೆ ಆರ್ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಮರುದಿನ ಚಾಸಾ–1 ರವರು ಪೊಲೀಸರಿಗೆ ಬಂದು ದೂರು ನೀಡಿರುತ್ತಾರೆ. 1 ನೇ ಆರೋಪಿ ಚಾಸಾ–1 ರವರಿಗೆ ಹೊಡೆದ ಗುದ್ದಲಿಯನ್ನು ನೋಡಿ ಗುರುತಿಸುತ್ತೇನೆ. ಸದರಿ ಗುದ್ದಲಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ1 ಎಂದು ಗುರುತಿಸಲಾಗಿದೆ.

ನಂತರ 3 ದಿನಗಳ ನಂತರ ನಾನು ಪೊಲೀಸರ ಜೊತೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ, ಸ್ಥಳ ತೋರಿಸಿದೆ. ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 3.00 ರಿಂದ 4.00 ಗಂಟೆವರೆಗೆ ಪಂಚನಾಮೆ ಮಾಡಿ, ನನ್ನ ಸಹಿ ಪಡೆದರು. ಸ್ಥಳದಲ್ಲಿ ಪೊಲೀಸರು ನಾನು ನೀಡಿದ ಗುದ್ದಲಿಯನ್ನು ಜಪ್ತಿ ಮಾಡಿದರು. ಸದರಿ ಪಂಚನಾಮೆಗೆ ಚಾಸಾ–5 ಹಾಗೂ 6 ರವರು ಸಹಿ ಮಾಡಿದ್ದಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ–3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೊಲೀಸರು 5 ಫೋಟೊಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ಸಾಕ್ಷಿಯು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿ–4 ರಿಂದ 8 ಎಂದು ಗುರುತಿಸಲಾಯಿತು. ಆರೋಪಿತರು ಸ್ಥಳಕ್ಕೆ ಬಂದಿದ್ದ ಆಟೋವನ್ನು ಫೋಟೋಗಳಲ್ಲಿ ನೋಡಿ ಗುರುತಿಸುತ್ತೇನೆ. ಸದರಿ ಫೋಟೋಗಳನ್ನು ನಿಪಿ–9 ಹಾಗೂ 10 ಎಂದು ಗುರುತಿಸಲಾಯಿತು.

**SC No.198/2021**
**PW.2**

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ-**

ಆರೋಪಿತರ ಪರ ವಕೀಲರ ಕೋರಿಕೆಯ ಮೇಲೆ ರೂ.500/- ವೆಚ್ಚದೊಂದಿಗೆ ಪಾಟೀಸವಾಲನ್ನು ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.